ಏಕರೀತಿಯದು. ಆದರೆ, ಸ್ಕಾವಿನ್‌ಸ್ಕಿ ಈ ಮೊದಲಿಗಿಂತ ಈಗ ತುಂಬ ಖುಷಿಯಲ್ಲಿದ್ದಾನೆ. ನಸುಕಿನಲ್ಲಿ ಏಳುತ್ತಾನೆ, ಉಪಹಾರ ಸೇವಿಸುತ್ತಾನೆ, ಲಾಟೀನಿನ ಗಾಜನ್ನು ಉಜ್ಜುತ್ತಾನೆ, ನಂತರ ಬಾಲ್ಕನಿಯ ಮೇಲೆ ಕುಳಿತು ದೂರ ದೂರದವರೆಗೆ ಜಲರಾಶಿಯನ್ನು ನೋಡುತ್ತ ಕುಳಿತುಕೊಳ್ಳುತ್ತಾನೆ. ಅಲ್ಲಿ ಕಾಣುವ ಚಿತ್ರಗಳಿಂದ ಆತನ ಕಣ್ಣುಗಳು ಎಂದಿಗೂ ಸಂತೃಪ್ತವಾಗುವುದಿಲ್ಲ. ಸಮುದ್ರದ ಅಗಾಧ ನೀಲಿ ಪಾತಳಿಯ ಮೇಲೆ, ಬಿಸಿಲಿಗೆ ಥಳಥಳಿಸುವ ಸಾಲು ಸಾಲು ಹಾಯಿಪಟಗಳು ಪ್ರತಿಫಲಿಸುವ ಅಪಾರ ಬೆಳಕಿಗೆ ಕಣ್ಣು ಕುಕ್ಕುತ್ತವೆ. ಕೆಲವು ಸಾರೆ, ಭೂಮಧ್ಯ ರೇಖೆಯತ್ತ ಚಲಿಸುವ ವ್ಯಾಪಾರಿ ಗಾಳಿಯಿಂದ ಪ್ರಭಾವಿತವಾದ ಹಡಗುಗಳು, ಅಲೆಗಳು, ಬೆಳ್ಳಕ್ಕಿಗಳು ಹಾಗೂ ಕಡಲುಕೋಳಿಗಳ ಹಾಗೆ ಒಂದರ ಹಿಂದೆ ಒಂದರಂತೆ ಮತ್ತಷ್ಟು ದೂರ ಚಲಿಸುತ್ತವೆ. ಬೆಳಕು ಹಗುರ ಅಲೆಗಳ ಮೇಲೆ ಹೊಯ್ದಾಡುತ್ತ, ನಯವಾಗಿ ಚಲಿಸುವುದನ್ನು ಅಲ್ಲಿದ್ದ ಕೆಂಪು ಪೀಪಾಯಿಗಳು ಸೂಚಿಸುತ್ತಿದ್ದವು. ಇಳಿ ಹೊತ್ತಿನಲ್ಲಿ ಹಡಗುಗಳಿಂದ ಮೇಲೇಳುವ ದೈತ್ಯಾಕಾರದ, ಕಂದುವರ್ಣದ ರೆಕ್ಕೆಯಂತಿದ್ದ ಹೊಗೆಯ ದಟ್ಟ ಗರಿಗಳು ನಿತ್ಯವೂ ಇಳಿ ಹೊತ್ತಿನ ಸಮಯದಲ್ಲಿ ಗೋಚರಿಸುತ್ತಿದ್ದವು. ನ್ಯೂಯಾರ್ಕಿನಿಂದ ಪ್ರವಾಸಿಗರನ್ನು ಹಾಗೂ ಸರಕು ಸರಂಜಾಮುಗಳನ್ನು ಹೊತ್ತು ತರುತ್ತಿದ್ದ ಆ ಹಡಗು ತನ್ನ ಹಿಂದೆ ರಾಶಿ ರಾಶಿ ನೊರೆಯನ್ನು ಕೊರೆದು ಸೀಳುದಾರಿಯನ್ನು ಸೃಷ್ಟಿಸುತ್ತ, ಆ್ಯಸ್ಪಿನ್‌ವಾಲ್ ಕಡೆಗೆ ಬರುತ್ತಿತ್ತು. ಬಾಲ್ಕನಿಯ ಇನ್ನೊಂದು ಬದಿಗೆ ಸ್ಕಾವಿನ್‌ಸ್ಕಿ ದೃಷ್ಟಿ ಹರಿಸಿದ. ಆ್ಯಸ್ಪಿನ್‌ವಾಲ್ ಹಾಗೂ ಅದರ ಕಾರ್ಯ ನಿರತ ಹಡಗುಕಟ್ಟೆ, ಅರಣ್ಯದಂತೆ ತೋರುವ ಅಲ್ಲಿರುವ ಹಡಗು ಕಂಬಗಳು, ದೋಣಿಗಳು, ವಿಮಾನಗಳು, ಅಲ್ಲಿಂದ ಸ್ವಲ್ಪದೂರದಲ್ಲಿ ಪಟ್ಟಣದ ಶ್ವೇತವರ್ಣದ ಮನೆಗಳು, ಗೋಪುರಗಳು–ಎಲ್ಲವೂ ಆತನ ಅಂಗೈಯಲ್ಲಿದ್ದಂತೆ ತೋರಿತು. ಆ ಗೋಪುರದ ಎತ್ತರದಿಂದ ಕೆಳಗೆ ನೋಡಿದಾಗ, ಸಣ್ಣ ಮನೆಗಳು ಕಡಲುಕೋಳಿಗಳ ಗೂಡುಗಳಂತೆ, ದೋಣಿಗಳು ಜೀರುಂಡೆಗಳಂತೆ ಗೋಚರಿಸಿದವು ಹಾಗೂ ಬಿಳಿ ಹಾಸುಗಲ್ಲಿನ ಬೀದಿಗಳಲ್ಲಿ ಅತ್ತ ಇತ್ತ ಅಲೆದಾಡುವ ಜನರು ಪುಟ್ಟ ಬಿಂದುಗಳಂತೆ ಕಂಡರು. ನಸುಕಿನಲ್ಲಿ ಸೌಮ್ಯವಾಗಿ ಬೀಸಿ ಬರುತ್ತಿದ್ದ ಪೂರ್ವದ ಗಾಳಿ ಮನುಷ್ಯ ಪ್ರಪಂಚದ ಗೊಂದಲದ ಸದ್ದನ್ನು ಹೊತ್ತು ತಂದಿತ್ತು. ಉಗಿ ಹಡಗುಗಳ ಸಿಳ್ಳೆಯ ಚೀತ್ಕಾರ ಆ ಸದ್ದಿನ ಮೇಲೆ ಮೇಲುಗೈ ಸಾಧಿಸಿತ್ತು. ಸಂಜೆಯ ಆರು ಗಂಟೆಯ ಸಮಯ ಹಡಗು ಕಟ್ಟೆಯ ಚಲನವಲನವೆಲ್ಲ ನಿಂತು ಹೋಯಿತು. ಕಡಲುಕೋಳಿಗಳು ಬಂಡೆಗಳ ಪೊಟರೆಯೊಳಗೆ ಅಡಗಿಕೊಂಡವು. ಅಲೆಗಳು ಕ್ಷೀಣಗೊಂಡು ಒಂದಿಷ್ಟು ಆಲಸಿಯಾದವು. ಅನಂತರ ಭೂಮಿಯ ಮೇಲೆ, ಸಮುದ್ರದ ಮೇಲೆ, ಗೋಪುರದ ಮೇಲೆ

**ತನ್ನ ಗೋಪುರಕ್ಕೆ, ತನ್ನ ಲಾಟೀನಿಗೆ, ಬಂಡೆಗಲ್ಲುಗಳಿಗೆ, ಮರಳು ದಿಬ್ಬಗಳಿಗೆ, ಏಕಾಂತಕ್ಕೆ ಆ ವೃದ್ಧ ಹೊಂದಿಕೊಂಡ. ಬಂಡೆಗಲ್ಲುಗಳ ಪೊಟರೆಗಳಲ್ಲಿ ಮರಿ ಮಾಡುವ ಕಡಲು ಕೋಳಿಗಳ ಜೊತೆ ಕೂಡ ಆತ ಹೊಂದಿಕೊಂಡ. ಸಂಜೆ ಹೊತ್ತು ದೀಪಗೃಹದ ಮಾಳಿಗೆಯ ಮೇಲೆ ಕುಳಿತು ಅವುಗಳ ಜೊತೆ ಸಭೆ ಕೂಡ ನಡೆಸುತ್ತಿದ್ದ.**